O.S.No.329/2015
PW -1

ದಿನಾಂಕಃ 25-11-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು.

ಮುಂದುವರೆದ ಪಾಟೀ :- ಶ್ರೀ ಜಿ.ಬಿ.ಹೆಚ್. ಪ್ರತಿವಾದಿ ಪರ ವಕೀಲರಿಂದ

ದಾವಾ ಅನುಸೂಚಿ 1 ನೇ ಸ್ವತ್ತನ್ನು ನನ್ನ ತಂದೆ ಮತ್ತು ಅವರ ಅಣ್ಣ ತಮ್ಮಾಂದಿರು ಭಾಗ ಆಗಿದ್ದಾರೆಂದು ತೋರಿಸಲು ನ್ಯಾಯಾಲಯದ ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಭಾಗ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಈಗಲೂ ಸಹ ಅವರ ತಂದೆ ಕಾಲದಲ್ಲಿ ಇದ್ದಂತೆ ಈಗಲು ಸಹ ಇದ್ದಾರೆ. ಸದರಿ ಜಮೀನು ದಿನ್ನೆ ಜಮೀನು ಆಗಿರುತ್ತದೆ, ಅದರಲ್ಲಿ ಮಳೆ ಬಂದರೆ ಅನುಕೂಲವಾಗುತ್ತದೆ ಇಲ್ಲವಾದರೆ ಇಲ್ಲ. ನನ್ನ ತಂದೆ ಯ ತಮ್ಮ ಮುದ್ದಪ್ಪ ಶಿಕ್ಷಕರಾಗಿದ್ದು , ನಂಜಪ್ಪ ಸಹ ಶಿಕ್ಷಕರಾಗಿದ್ದರು. ಆದ ಕಾರಣ ನನ್ನ ತಂದೆ ಮತ್ತು ಅವರ ಅಣ್ಣ ತಮ್ಮಂದಿರಿಗೆ ಆದಾಯ ಬರುತ್ತಿದ್ದ ಕಾರಣ ಸ್ವತಂತ್ರವಾಗಿ ಆಸ್ತಿಗಳನ್ನು ಸಹ ಕೊಂಡುಕೊಂಡಿರುತ್ತಾರೆ ಎಂದರೆ ಸರಿ.

ನನ್ನ ತಂದೆ ದಾವಾ ಅನುಸಾು -2 ರಿಂದ 5 ನೇ ಸ್ವತ್ತುಗಳನ್ನು ಸ್ವಂತತ್ರವಾಗಿ ಕೊಂಡುಕೊಂಡಿರುತ್ತಾರೆ ಎಂದರೆ ಸರಿ . ಅದರಲ್ಲಿ ನನ್ನ ತಂದೆಯ ಅಣ್ಣ ತಮ್ಮಂದಿರಿಗೆ ಯಾವುದೇ ರೀತಿಯ ಭಾಗ ಇರುವುದಿಲ್ಲ , ಅದು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ ಎಂದರೆ ಸರಿ. ನನ್ನ ತಂದೆ ಅವರು ಪೌವತಿಯಾಗುವ ತನಕ ಸದರಿ ಸ್ವತ್ತುಗಳನ್ನು ಅನುಭವಿಸುತ್ತಿದ್ದರು. ದಾವಾ ಅನುಸೂಚಿ 6 ನೇ ಸ್ವತ್ತು ಹಳೇ ಮನೆಯಾಗಿದ್ದು ಅದು ಈಗ ಬಿದ್ದು ಹೋಗಿರುತ್ತದೆ, ಅದರಿಂದ ಯಾವುದೇ ಆದಾಯ ಬರುವುದಿಲ್ಲ.

ನನ್ನ ತಂದೆ ಕಡಳೆಕಾಯಿ , ಹುಸಣೆ ಹಣ್ಣಿನ ಪಂಚಮಾರು ವ್ಯಾಪಾರ ಮಾಡುತ್ತಿದ್ದರು ಎಂದರೆ ಸ್ವಲ್ಪ ಸ್ವಲ್ಪ ಮಾಡುತ್ತಿದ್ದರು , ಅದರಿಂದ ಸಹ ನನ್ನ ತಂದೆ ಆದಾಯ ಪಡೆಯುತ್ತಿದ್ದರು ಎಂದರೆ ಸರಿ. ನಮ್ಮ ಊರಿನಲ್ಲೆ ಸದರಿ ಪಂಚಮಾರು ವ್ಯಾಪಾರ ನನ್ನ ತಂದೆ ಮಾಡುತ್ತಿದ್ದರು. ಹೊಟೆಲ್ ವ್ಯಾಪಾರ ಸಹ ಸಿದ್ದನಹಳ್ಳಿ ಗ್ರಾಮದಲ್ಲಿ ನಡೆಸುತ್ತಿದ್ದರು. ನಾನು ಮಾರವೇನಹಳ್ಳಿ ಗ್ರಾಮಕ್ಕೆ ಎಷ್ಟೆ ವಯಸ್ಸಿನಲ್ಲಿ ಹೋಗಿದ್ದೆ ಎಂದರೆ ಸಾಕ್ಷಿ ನಾನು ಯಾವತ್ತೂ ಕೂಡ ಗ್ರಾಮಕ್ಕೆ ಹೋಗಿಲ್ಲ ಎಂದು ನುಡಿಯುತ್ತಾರೆ. ನಾನು ಚಿಕ್ಕ ಹುಡುನಾದ ಕಾಲದಲ್ಲಿ ಬಹಳ ತುಂಟನಾಗಿದ್ದು ಆದ ಕಾರಣ ನನ್ನ ತಂದೆ ನನಗೆ ಹೊಡೆ ಬಡಿ ಮಾಡುತ್ತಿದ್ದರು ಅದನ್ನು ತಪ್ಪಿಸಲು ನನ್ನ ಚಿಕ್ಕಮ್ಮ ನನಗೆ ಮರವೇನಳ್ಳಿ ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ನನ್ನ ಮದುವೆ ಆಗುವ ತನಕ ಅದೇ ಗ್ರಾಮದಲ್ಲಿ ವಾಸವಾಗಿದ್ದೆ ಎಂದರೆ ಸರಿಯಲ್ಲ. ತದ ನಂತರ ಹಿಂದೂಪುರದಲ್ಲಿ ಮದುವೆಯಾಗಿ ಅಲ್ಲೆ ವಾಸವಾಗಿದ್ದೇನೆ ಎಂದರೆ ಸರಿಯಲ್ಲ. ನನ್ನ ಆಧಾರ್ ಕಾರ್ಡ್ , ಮತದಾರರ ಪಟ್ಟಿ ಎಲ್ಲವೂ ಸಹ ಹಿಂದೂಪುರಕ್ಕೆ ಸೇರಿದವು ಆಗಿದ್ದಾವೆ ಎಂದರೆ ಸರಿಯಲ್ಲ.

ನನ್ನ ಇಬ್ಬರೂ ಮಕ್ಕಳು ಸಹ ದ್ವಿತಿಯ ಪಿಯುಸಿ ಓದುತ್ತಿದ್ದಾರೆ. ಅವರುಗಳ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ತಂದು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನನ್ನ ಮಕ್ಕಳು ಆಧಾರ್ ಕಾರ್ಡ್ ಹಾಗೂ ಮತದಾರರ ಪಟ್ಟಿಯನ್ನು ತಂದು ನ್ಯಾಯಾಲಯದ ಮುಂದೆ ಹಾಜರುಪಡಿಸಿಸಲು ನನಗೆ ಯಾವುದೇ ತೊಂದರೆ ಇಲ್ಲ. ನಾನು 9 ನೇ ವಯಸ್ತಿನಿಂದ ಇಂದಿನವರೆಗೆ ಸಿದ್ದನಹಳ್ಳಿ ಗ್ರಾಮದಲ್ಲಿ ವಾಸವಾಗಿಲ್ಲ ಹಾಗೂ ಒಟ್ಟು ಕುಟುಂಬದಲ್ಲಿ ವಾಸವಾಗಿಲ್ಲ ಎಂದರೆ ಸರಿಯಲ್ಲ. ಯಾವತ್ತೂ ಕೂಡ ನಾನು ದಾವಾ ಸ್ವತ್ತುಗಳನ್ನು ಅನುಭವಿಸಿಲ್ಲ ಎಂದರೆ ಸರಿಯಲ್ಲ.

ನಾನು ಊರು ಬಿಟ್ಟು ಹೋದ ನಂತರ ದಾವಾ ಅನುಸೂಚಿ 2 ರಿಂದ 5 ನೇ ಆಸ್ತಿಗಳನ್ನು ಸಂಪಾದನೆಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಸಿದ್ದನಹಳ್ಳಿ ಗ್ರಾಮದಲ್ಲಿ ಮತದಾರರ ಪಟ್ಟಿಯಲ್ಲಿ ನನ್ನ ಹೆಸರು ಇದ್ದು , ಅಲ್ಲೆ ನಾನು ಮತವನ್ನು ಸಹ ಚಲಾಯಿಸಿರುತ್ತೇನೆ. ಪಡಿತರ ಚೀಟಿ ಸಹ ಸಿದ್ದನಹಳ್ಳಿ ಗ್ರಾಮದ ವಿಳಾಸದಲ್ಲಿದೆ. ಅವುಗಳನ್ನು ಹಾಜರುಪಡಿಸಲು ನನಗೆ ಯಾವುದೇ ರೀತಿಯ ತೊಂದರೆ ಇಲ್ಲ.

ದಾವಾ ಅನುಸೂ2 ಮತ್ತು 3 ಮೊದಲಿಗೆ ದಿನ್ನೆ ಜಮೀನುಗಳು. ಮುಂಚಿತವಾಗಿ ಸರ್ವೆ ನಂ-47 ನೀರಿನ ಆಶ್ರಯಕ್ಕೆ ಭಾವಿ ಇತ್ತು. ಸದರಿ ಭಾವಿ ಓಣಗಿದ ಕಾರಣ ಪ್ರತಿವಾದಿಗಳು ಆಳ ತೆಗೆಸಿ ನೀರು ಬರುವಂತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮೊದಲಿಗೆ ಸದರಿ ಭಾವಿ ಓಣಗಿ ಹೋಗಿತ್ತು ಎಂದರೆ ಸರಿ. ಪ್ರತಿವಾದಿಗಳೇ ಸದರಿ ಭಾವಿಯಲ್ಲಿ ಆಳವನ್ನು ತೆಗೆಸಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ-49 ಮತ್ತು 50 ರಲ್ಲಿ ಅಡಿಕೆ ತೋಟ ಇದೆ ಎಂದರೆ ಸರಿಯಲ್ಲ. ಸರ್ವೆ ನಂ-49 ರಲ್ಲಿ ಬೋರನ್ನು ಕೊರೆಸಿ ಪಂಪ್ ಸೆಟ್ ಸಹ ಪ್ರತಿವಾದಿಗಳೇ ಹಾಕಿಸಿರುತ್ತಾರೆ ಎಂದರೆ ಸರಿಯಲ್ಲ. ಭಾವಿಗೆ ಪಂಪ್ ಸೆಟ್ ಇದೆ. ಕೊಳವೆ ಭಾವಿಗೂ ಸಹ ಪಂಪ್ ಸೆಟ್ ಇದೆ. ಅದು ಎಷ್ಟು ಆಳ ಇರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಬೋರ್ ವೆಲ್ ನ್ನು ಕಡಗತ್ತೂರು ಗ್ರಾಮದ ರೆಡ್ಡಿ ರವರ ಲಾರಿಯಿಂದ ತೆಗೆಸಿರುತ್ತಾರೆ. ನಾನು ಬೋರ್ ವೆಲ್ ಕೊರೆಸುವಲ್ಲಿ ಯಾವುದೇ ರೀತಿಯ ಭಾಗವಹಿಸಿರಲಿಲ್ಲ ಎಂದರೆ ಸರಿಯಲ್ಲ. ಬೋರ್ ವೆಲ್ ಕೊರೆಸಲು ಆ ಕಾಲದಲ್ಲಿ 1 ಲಕ್ಷ ರೂ ಖರ್ಚು ಆಗಿತ್ತು. ಪಂಪು ಮೋಟಾರು ತೆಗೆದುಕೊಂಡು ಬರಲು 50 ಸಾವಿರ ರೂ ಖರ್ಚು ಆಗಿರುತ್ತದೆ. ಎಷ್ಟನೇ ಸಾಲಿನಲ್ಲಿ ಆ ರೀತಿ ಬೋರ್ ವೆಲ್ ಗೆ ಮೋಟಾರು ತಂದೆ ಬಗ್ಗೆ ಸಾಕ್ಷಿ ಪ್ರಶ್ನಿಸಿದಾಗ ಸಾಕ್ಷಿ ಸದರಿ ಪ್ರಶ್ನೆಗೆ 10 ವರ್ಷ ಆಗಿರಬಹುದು ಎಂದು ನುಡಿಯುತ್ತಾರೆ.

ಜಮೀನಿನ ಸಂಪಾದನೆಯಿಂದ ಅದಕ್ಕೆ ಹಣ ಬಂದಿರುತ್ತದೆ. ದಾವಾ ಸ್ವತ್ತುಗಳಲ್ಲಿ ಮುಸಕಿನ ಜೊಳ , ರಾಗಿ , ಕಳ್ಳೆಕಾಯಿ ಬೆಳೆಯುತ್ತೇವೆ. ಬೋರ್ ವೆಲ್ ಕೊರೆಸಲು ಮತ್ತು ಪಂಪ್ ಸೆಟ್ ತರಲು ಸ್ವಂತ ಹಣವನ್ನೆ ಖರ್ಚು ಮಾಡಿರುತ್ತೇವೆ. ಸುಮಾರು 25 ರಿಂದ 30 ವರ್ಷಗಳಿಂದ ಬರಗಾಲ ಇದೆ ಎಂದರೆ ಸರಿ, ಮಳೆ ಬೆಳೆ ಸರಿಯಾಗಿ ಬರುತ್ತಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಕೂಲಿ ಕೆಲಸಕ್ಕೆ ಹೋಗುತ್ತೇನೆ ಎಂದು ನುಡಿಯುತ್ತಾರೆ. ಬೋರ್ ವೆಲ್ ಹಾಕಿಸಲು ಮತ್ತು ಪಂಪ್ ಸೆಟ್ ನ್ನು ತರಲು ಪ್ರತಿವಾದಿಗಳು 2 ಲಕ್ಷ ರೂ ಸಾಲವನ್ನು ಎಸ್ ಬಿ ಎಂ ಪುರವಾರ ಶಾಖೆಯಿಂದ ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿ ಅವರ ಜಮೀನಿನಲ್ಲಿ ಸದರಿ ಸಾಲವನ್ನು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಅದೇ ರೀತಿ 40 ಸಾವಿರ ರೂ ಹಣವನ್ನು ಪ್ರತಿವಾದಿಗಳು ಕೋ ಅಪರೇಟೀವ್ ಸೊಸೈಟಿಯಿಂದ ಸಾಲವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಖಾಸಗಿ ವ್ಯಕ್ತಿಗಳಿಂದ ಸಹ ಪ್ರತಿವಾದಿಗಳು 3 ಲಕ್ಷ ರೂ ಹಣವನ್ನು ಸಾಲವಾಗಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ-49 ಮತ್ತು 50 ರಲ್ಲಿ ಸದರಿ ಸಾಲ ಮತ್ತು ತಮ್ಮ ಪರಿಶ್ರಮದಿಂದ ಪ್ರತಿವಾದಿಗಳು ತೋಟವನ್ನು ಬೆಳೆಸಿರುತ್ತಾರೆ ಎಂದರೆ ಸರಿಯಲ್ಲ. 5 ಲಕ್ಷ ರೂ ಸಾಲ ಇಂದಿಗೂ ಇದ್ದು ಅದನ್ನು ಮರು ಪಾವತಿಸಬೇಕಾಗಿರುತ್ತದೆ ಎಂದರೆ ಸರಿಯಲ್ಲ.

ಸರ್ವೆ ನಂ-49 ಮತ್ತು 50 ರ ಬಗ್ಗೆ 1987 ರಿಂದ ಇಂದಿನವರೆಗೆ ಮಾನ್ಯ ಉಚ್ಚ ನ್ಯಾಯಲಾಯದಲ್ಲಿ ಕೇಸುಗಳು ಚಾಲ್ತಿಯಲ್ಲಿವೆ ಎಂದರೆ ಸರಿಯಲ್ಲ. ಆರ್ ಎಸ್ ಎ 2960/2010 ರಂತೆ ಇಂದಿಗೂ ಸಹ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸದರಿ ಕೇಸುಗಳನ್ನು ಚಲಾಯಿಸಲು 1987 ನೇ ಸಾಲಿನಿಂದ 1 ಲಕ್ಷ ರೂ ಖರ್ಚು ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಾನು ಪ್ರತಿವಾದಿಗಳ ಜೊತೆಗೆ ಇಲ್ಲದೇ ಇರುವುದರಿಂದ ಸದರಿ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಿ. 04/06/1996 ನೇ ಸಾಲಿನಲ್ಲಿ ನನ್ನ ತಂದೆ ಜಿವಂತ ಇದ್ದ ಕಾಲದಲ್ಲಿ ಪ್ರತಿವಾದಿಗಳ ಹೆಸರಿಗೆ ಒಂದು ಮರಣ ಶಾಸನ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಪೌವತಿಯಾಗಿ ಸುಮಾರು 22 ವರ್ಷಗಳು ಆಗಿವೆ. ನನ್ನ ತಂದೆ ಮರಣಾ ನಂತರ ಪ್ರತಿವಾದಿಗಳು ಖಾತೆ ಪಹಣಿ ನನ್ನ ತಾಯಿ ಹೆಸರಿಗೆ ಜೀವನದ ಭದ್ರತೆಗಾಗಿ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದ ಪೌವತಿಯಾದ 12 ವರ್ಷಕ್ಕೆ ನನ್ನ ತಾಯಿ ಮೃತಪಟ್ಟಿರುತ್ತಾರೆ. ನನ್ನ ತಾಯಿ ಜೀವಂತ ಇದ್ದ ಕಾಲಕ್ಕೆ ದಿ. 17/01/2005 ರಲ್ಲಿ ದಾವಾ ಅನುಸೂಚಿ 2 ರಿಂದ 5 ನೇ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಪ್ರತಿವಾದಿಗಳ ಹೆಸರಿಗೆ ಮರಣ ಶಾತನ ಪತ್ರ ಬರೆದುಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ.

ನನ್ನ ತಂದೆ ತಾಯಿ ಮೃತಪಟ್ಟ ನಂತರ ಪ್ರತಿವಾದಿಗಳೇ ತಿಥಿ ಕಾರ್ಯಗಳನ್ನು ಮಾಡಿಸಿರುತ್ತಾರೆ ಎಂದರೆ ನಾನು ಮಾಡಿದ ನಂತರ ಪ್ರತಿವಾದಿಗಳು ಮಾಡಿರುತ್ತಾರೆ . ನನಗೂ ಮತ್ತು ಪ್ರತಿವಾದಿಗಳಿಗೂ ಆಗಿ ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ನನ್ನನ್ನು ಮಾತನಾಡಿಸುತ್ತಿರಲಿಲ್ಲ ಆದ ಕಾರಣ ನಾನು ಅವರ ತಿಥಿ ಕಾರ್ಯಕ್ಕೂ ಸಹ ಬಂದಿರಲಿಲ್ಲ ಎಂದರೆ ಸರಿಯಲ್ಲ.

ನನ್ನ ಅಕ್ಕ ತಂಗಿಯರು ಎಂದರೆ ಗೌರಮ್ಮ , ಗಂಗಮ್ಮ ಪೌವತಿಯಾಗಿರುತ್ತಾರೆ. ಇನ್ನಿಬ್ಬರ ಹೆಸರು ನೇತ್ರಾವತಿ , ಅರುಣಾಕ್ಷಿ ಎಂದು ಇರುತ್ತಾರೆ. ಗೌರಮ್ಮ ಮತ್ತು ಗಂಗಮ್ಮ ರವರ ಗಂಡ ಮತ್ತು ಮಕ್ಕಳು ಜೀವಂತ ಇದ್ದಾರೆ. ಹೆಣ್ಣು ಮಕ್ಕಳ ಕೆಲಸ ಕಾರ್ಯಗಳಿಗೆ ಯಾವತ್ತೂ ಭಾಗ ವಹಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಮನೆಯ ಕೆಲಸ ಕಾರ್ಯಗಳಿಗೆ ನಾನು ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ದಾವಾ ಸ್ವತ್ತುಗಳಲ್ಲಿ 9 ನೇ ವರ್ಷದಿಂದ ಇಂದಿನವರೆಗೆ ಅನುಭವಿಸಿರಲಿಲ್ಲ ಮತ್ತು ಯಾವುದೇ ರೀತಿಯ ಹಕ್ಕು ಅಧಿಕಾರವನ್ನು ಚಲಾಯಿಸಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತಿನಲ್ಲಿ ಯಾವುದೇ ರೀತಿಯ ಭಾಗ ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಅಣ್ಣ ತಮ್ಮಂದಿರು ಯಾವತ್ತೂ ಜಗಳವಾಡಿರುವುದಿಲ್ಲ ಚೆನ್ನಾಗಿರುತ್ತೇವೆ. ನಾನು ಈ ದಾವೆಯನ್ನು ಹೂಡುವುದಕ್ಕಾಗಿ ದಾಖಲೆಗಳನ್ನು ಸೃಷ್ಟಿಸಿಕೊಂಡು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂರದೆ ಸರಿಯಲ್ಲ. ನನಗೆ ಈ ದಾವೆಯನ್ನು ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಭಾಗ ತೆಗೆದುಕೊಳ್ಳುವ ಒಂದೇ ಕಾರಣದಿಂದ ಸುಳ್ಳು ದಾವೆಯನ್ನು ಹೂಡಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

(ಅಬ್ದುಲ್ ರಹಿಮಾನ್ ಎ. ಮುಲ್ಲಾ)
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ